ಶೀತಗಾಳಿಗೆ ಹೂವು ಉದುರುವಿಕೆ| ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದ ಮಾವು ಬೆಳೆಗಾರರಲ್ಲಿ ನಿರಾಸೆ

ಹಣ್ಣುಗಳ ರಾಜನಿಗೆ ಶಿಲೀಂಧ್ರ ರೋಗಬಾಧೆ

ತಾವರಕೆರೆ ಟಿ. ನಾಗರಾಜ್

ತಾವರೆಕೆರೆ: ಶೀತ ಚಳಿಯಿಂದ ಜನತೆ ಒಂದು ಕಡೆ ತತ್ತರಿಸುತ್ತಿದ್ದಾರೆ. ಮತ್ತೊಂದು ಕಡೆ ಫಲ ನೀಡುವ ಮಾವು ಸೇರಿದಂತೆ ಇತರ ಗಿಡಗಳಲ್ಲಿ ಹೂ ಬಿಡುವ ಸಮಯದಲ್ಲಿ ಆಪಾರ ತೊಂದರೆ ಉಂಟಾಗುತ್ತಿದೆ. ಕೇವಲ ಮಾವಿನ ಮರದಲ್ಲಿ ಶೇಕಡಾ 60ರಷ್ಟು ಮಾತ್ರ ಹೂವು ಬಿಟ್ಟಿದೆ. ಕೆಲವು ಮರದಲ್ಲಿ ಬೆರಳಣಿಕೆಯಷ್ಟು ಮಾತ್ರ ಹೂವು ಕಾಣುತ್ತಿದೆ.

ಇನ್ನೂ ಮುಂದೆಯಾದರೂ ರಥಸಪ್ತಮಿ ನಂತರ ಬಿಸಿಲು ತಾಪಮಾನ ದಿನೇ ದಿನೆ ಹೆಚ್ಚಾಗುತ್ತಿದೆ. ಇದರಿಂದ ಹೂವು ಮರದಲ್ಲಿ ಜಾಸ್ತಿಯಾಗುವ ಸಂಭವ ಇದೆ. ರೈತರು ಎದುರು ನೋಡುತ್ತಿದ್ದಾರೆ. ಕಳೆದ ಎರಡು ವರ್ಷದಲ್ಲಿ ಸರಿಯಾಗಿ ಹೂವು ಬಡದೆ ನಷ್ಟ ಅನುಭವಿಸುವ ಸ್ಥಿತಿಯಲ್ಲಿದ್ದ ರೈತ ಈ ವರ್ಷ ಲಾಭ ಸಿಗುವ ನಿರೀಕ್ಷೆಯಲ್ಲಿದ್ದಾನೆ. ಮಾವು ಬೆಳೆಗಾರರನ್ನು ಶೀತಗಾಳಿಯಿಂದಾಗಿ ಆರ್ಥಿಕ ಸಹ ಸಂಕಷ್ಟಕ್ಕೊಳಗಾಗುವ ಸಾಧ್ಯತೆ ಇದೆ. ಸಮೃದ್ಧಿಯಾಗಿ ಹೂವು ಬಿಟ್ಟು ಉತ್ತಮ ಫಸಲು ನೀರಿಕ್ಷೆಯಲ್ಲಿರುವ ರೈತರ ಮಾವಿನ ತೋಪಿನಲ್ಲಿ ಹೂವನ್ನು ಸರಿಯಾಗಿ ಬಿಡದ ಮರಗಳನ್ನು ಕಂಡು ಬೆಳೆಗಾರರು ನಿರಾಸೆಗೊಳಗಾಗಿದ್ದಾರೆ. ಪ್ರತಿ ವರ್ಷವೂ ಬೆಳೆಗಾರರು ಉತ್ತಮ ಮಾವಿನ ಫಸಲಿನ ನಿರೀಕ್ಷೆಯಲ್ಲಿರುವರು. ಮಾವು ಬೆಳೆಗಾರರಿಗೆ ಸಂಕಷ್ಟ ಎದುರಾಗಿದೆ. ಆದರ, ಶಿಲೀಂಧ್ರ ರೋಗಕ್ಕೊಳಗಾಗಿದೆ. ಬೆಂಗ ಳೂರು ಗ್ರಾಮಾಂತರ ಜಿಲ್ಲೆಯಲ್ಲಿ16 ಸಾವಿರ ಎಕರೆ ಮಾವಿನ ತೋಪು ಇರುತ್ತದೆ. ಹೊಸಕೋಟೆ



ತಾಲೂಕಿನಲ್ಲೇ 4500 ಎಕರೆ ಇದೆ. ಇದರಲ್ಲಿ ತಾವರೆಕೆರೆ ಗ್ರಾಮ ಪಂಚಾಯತಿಯ ಗಂಗಾಪುರ ಗ್ರಾಮದಲ್ಲಿ 1000 ಎಕರೆ ಮಾವಿನ ತೋಪು ಹೊಂದಿದೆ. ಕಳೆದರಡು ವರ್ಷದಿಂದ ಉತ್ತಮ ಫಸಲು ಬಂದರೂ ಉತ್ತಮ ದರ ಸಿಗಲಿಲ್ಲ, ಆದರೆ, ಈ ವರ್ಷ ಮರಗಳ ರಾಜನೆಂದೇ ಎನಿಸಿಕೊಂಡಿರುವ ಬಾದಾಮಿ ಮಾವಿನ. ಮರ ಹಾಗೂ ಇತರೆ ಮರದಲ್ಲಿ ಶಿಲೀಂದ್ರ ರೋಗ ಬಾಧೆ ಎದುರಾಗಿದೆ. ಈ ರೋಗವು ಹೂವು ಆಂತದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಸಾಮಾನ್ಯವಾಗಿ ಜನವರಿಯಿಂದ ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ರೋಗದ ಲಕ್ಷಣ ಕಾಣಿಸಿಕೊಳ್ಳುತ್ತದೆ. ಈ ಅವಧಿಯಲ್ಲಿ ಹಗಲು ಹೆಚ್ಚು ಉಷ್ಣಾಂಶದಿಂದ ಕೂಡಿದ್ದು ರೋಗ ಉಲ್ಬಣಗೊಳ್ಳುತ್ತದೆ.

ಈ ಭಾರಿರೋಗ ಬಾಧೆ ಹೆಚ್ಚಾಗಿ ಕಾಡುತ್ತಿದೆ. ರಾಷ್ಟ್ರೀಯ ಹೆದ್ದಾರಿ ಬೆಂಗಳೂರು -ಚಿನ್ನೈ ಮಾರ್ಗವಾಗಿ ಎನ್‌ಎಚ್-75 ರಸ್ತೆಯ ಸಮೀಪವಿರುವ ಗಂಗಾಪುರ ಗ್ರಾಮದಲ್ಲಿ ಹೆಚ್ಚಾಗಿ ರೈತರು ಮಾವಿನ ಹೂವು ಇರುವ ಕಾರಣ ಈ ವರ್ಷ ಮಾವಿನ ಫಸಲು ಹೆಚ್ಚಾಗಿ ಬಂದು ಕೈತುಂಬಾ ಹಣ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ರೈತರಿಗೆ ಲಾಭ ದೊರೆಯುವುದು ಅನುಮಾನವಾಗಿದೆ. ಮಾವಿನ ಬೇಸಾಯವನ್ನೇ ನಂಬಿಕೊಂಡ ಅನೇಕ ಕುಟುಂಬ ವರ್ಷಕ್ಕೊಮ್ಮೆ ಸರಿಯಾದ ಬೆಳೆ ಬಂದರೆ ಕೈತುಂಬಾ ಕಾಸು ಬರುತ್ತದೆ. ನಮ್ಮ ಸಂಸಾರದ ಜೀವನಕ್ಕೆ ನಾಂದಿಯಾಗುತ್ತದೆ. ಉತ್ತಮ ಬೆಳೆಯ ನಿರೀಕ್ಷೆಯಲ್ಲಿದ್ದ ರೈತ ಕುಟುಂಬಗಳು ಈ ರೋಗದ ಬಾಧೆ ಕಂಡು ಕಂಗಲಾಗಿದ್ದಾರೆ.

ಹೂವು ಉದುವಿಕೆಯಿಂದ ನಷ್ಟ

ಮಾವಿನ ಮರದಲ್ಲಿ ಅತಿ ಹೆಚ್ಚು ಹೂವು ಬಿಟ್ಟ ಕಾರಣ ಉತ್ತಮ ಇಳುವರಿ ನಿರೀಕ್ಷೆಯಲ್ಲಿದ್ದೆವು. ಆದರೆ, ಮಾವಿನಮರದಲ್ಲಿ ಹೂವುಗಳು ಉದುರುತ್ತಿದೆ. ಇದರಿಂದ ಆಪಾರ ನಷ್ಟ ಉಂಟಾಗುವ ಸಂಭವವಿದೆ. ಮಾವಿನ ಹೂವನ್ನು ಉಳಿಸಿಕೊಳ್ಳಲು ಔಷಧ ಸಿಂಪಡಣೆ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳು ಮಾವಿನ ತೋಪುಗಳಿರುವ ಗ್ರಾಮಗಳಿಗೆ ಭೇಟಿ ನೀಡಿ ಈ ಹೂವು ಉದುರುವ ಬಗ್ಗೆ ಒಳ್ಳೆಯ ಮಾಹಿತಿ ನೀಡಬೇಕು. ಈ ಮೂಲಕ ಫಸಲು ಕೈ ತುಂಬಾ ಸಿಗಲೆಂದು ಹರಸಾಹಸ ಮಾಡುತ್ತಿದ್ದೇವೆಂದು ಮಾವು ಬೆಳೆಗಾರ ಗಂಗಾಪುರ ನರಸಿಂಹಪ್ಪ ಹೇಳಿದರು.

ನಿಯಂತ್ರಣಕ್ಕೆ ಔಷಧ ಸಂಪಡಣೆಗೆ ತೋಟಗಾರಿಕೆ ಇಲಾಖೆ ಸಂಪರ್ಕಿಸಿ

ಹೊಸಕೋಟೆ ತಾಲೂಕಿನ ಎಲ್ಲಾ ಮಾವಿನ ತೋಪುಗಳಲ್ಲಿ ಪರಿಶೀಲನೆ ಮಾಡುತ್ತಿದೆ. ಹೂವು ಗೊಂಚಲು ಕಪ್ಪಾಗಿರುವ ಶಿಲೀಂಧ್ರ ರೋಗಕಂಡು ಬಂದಿದೆ. ಇದರ ಜೊತೆಗೆ ಜಿಗಿ ಹುಳು ಸಹ ಇದೆ. ಪ್ರಸ್ತುತ ಈ ರೋಗ ಹರಡಲು ಆನಾನುಕೂಲ ವಾತಾವರಣ ಕಾರಣ ಆಗಾಗಿ ರೈತರು ರೋಗಕ್ಕೆ ಔಷಧ ಸಿಂಪಡಿಸಿ ರೋಗ ನಿಯಂತ್ರಣ ಕ್ರಮ ಅನುಸರಿಸುವೆಂಕು. ಆಗ ಮಾವಿನ ಹೂವುಗಳನ್ನು ಉಳಿಸಿ ಕೊಳ್ಳಬಹುದು. ಆದ್ದರಿಂದ ಹೆಚ್ಚಿನ ಸಹಾಯಕ ತೋಟಗಾರಿಕೆ ಇಲಾಖೆ ನಿರ್ದೇಶಕ ರೇಖಾ ಅವರನ್ನು ಸಂಪರ್ಕಿಸಿ.

ವಿಶೇಷ

Hosadiganta pg 10

ರಾಜ್ಯದ ಬೀಜ ನಿಗಮದ ಅಧಿಕಾರಿಗಳಿಗೆ ಕೃಷಿ ಸಚಿವ ಚಲುವರಾಯಸ್ವಾಮಿ ಸೂಚನೆ

ಆರು ಲಕ್ಷ ಕ್ವಿಂಟಾಲ್ ಬೀಜೋತ್ಪಾದನೆ ಗುರಿ

ಬೆಂಗಳೂರು: ರಾಜ್ಯದ ಬೀಜ ನಿಗಮದ ಮತಿಯಿಂದ 2025-26ನೇ ಸಾಲಿಗೆ ಆರು ಲಕ್ಷ ಕ್ವಿಂಟಾಲ್ ಬೀಜೋತ್ಪಾದನೆ ಗುರಿ ಹೊಂದಿದೆ. ಆದರ ಸಾಧನೆಗೆ ಸಿದ್ಧತೆ ನಡೆಸುವಂತೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮದ ಆಡಳಿತ ಮಂಡಳಿ ಸಭೆ ನಡೆಸಿ ಮಾತನಾಡಿದ ಅವರು, ಕೃಷಿಅಭ್ಯುದಯದ ಆಶಯದೊಂದಿಗೆರಚನೆಗೊಂಡಿರುವ ಕರ್ನಾಟಕ ರಾಜ್ಯ ಬೀಜ ನಿಗಮವು, ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಪರಿಣಾಮಕಾರಿ ಪರಿವರ್ತನೆಗಳೊಂದಿಗೆ ರೈತರಿಗೆ ಇನ್ನಷ್ಟು ಗುಣಾತ್ಮಕ ಸೇವೆ ಒದಗಿಸಬೇಕು.

ಬೀಜೋತ್ಪಾದನೆ, ಗುರಿಸಾಧನೆಗೆ ಜತೆಗೆ ಸುಧಾರಿತ ಸೇವಾ ಸೌಲಭ್ಯವನ್ನು ಒದಗಿಸ ಬೇಕು. ನಿಗಮವು 2024-25ನೇ ಸಾಲಿನಲ್ಲಿ 4.30 ಲಕ್ಷ ಕ್ವಿಂಟಾಲ್ ಬೀಜೋತ್ಪಾದನೆ ಗುರಿ



ಹೊಂದಿದ್ದು, ಈ ತನಕ 0.75 ಲಕ್ಷ ಕ್ವಿಂಟಾಲ್ ದಾಸ್ತಾನು ಸ್ವೀಕರಿಸಲಾಗಿದೆ. ಉಳಿಕೆಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಹೈದರಾಬಾದ್‌ನೊಂದಿಗೆ ಹೊಸತಳಿ ಆಳವಡಿಕೆ ಬಗ್ಗೆ ಒಪ್ಪಂದ: ರಸಗೊಬ್ಬರ ಕಾವು ದಾಸ್ತಾನು ಯೋಜನೆಯಲ್ಲಿ 2024-25ನೇ ಸಾಲಿನಲ್ಲಿ 1.18 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಪಡೆದು 1.10ಲಕ್ಷ ಮೆಟ್ರಿಕ್ ಟನ್ ವಿತರಿಸಿದ್ದು, ಬಾಕಿ 0.8 ಲಕ್ಷ ಮೆಟ್ರಿಕ್ ಟನ್ ಆದಷ್ಟು ಶೀಘ್ರವಾಗಿ ವಿಲೇವಾರಿ ಮಾಡಬೇಕೆಂದರು. ಐಸಿಆರ್ ಎಸ್‌ಎಟಿ ಹೈದರಾ ಬಾದ್‌ನೊಂದಿಗೆ ಹೊಸತಳಿ ಆಳವಡಿಕೆ ಬಗ್ಗೆ ಒಪ್ಪಂದ ಮಾಡಿಕೊಂಡಿದೆಂದರು.

ಇದುವರೆಗಿನ ಪ್ರಗತಿ ಏನು? ಯಾವ ತಳಿ ಆಳವಡಿಸಲಾಗಿದೆ. ರೈತರಿಗೆ ಆಗಿರುವ ಪ್ರಯೋಜನವೇನು? ಎಂಬ ಬಗ್ಗೆ ಮಾಹಿತಿ ಪಡೆದ ಸಚಿವರು ನಿಗಮದ ಕಾರ್ಯ ಚಟುವಟಿಕೆಗಳು ರೈತರ ಹೊಲಗಳಲ್ಲಿ ರಚನಾತ್ಮಕ ಪರಿಣಾಮ ಬೀರುವುದನ್ನು ಖಾತರಿ ಪಡಿಸಿಕೊಳ್ಳುವಂತೆ ನರ್ದೇಶನ ನೀಡಿದರು.

ಎನ್‌ಎಫ್‌ಎಸ್‌ಎಂ ಯೋಜನೆಯಲ್ಲಿ 2023-24 ಮತ್ತು 2024-25ನೇ ಸಾಲಿನಲ್ಲಿ ಉತ್ಪಾದಿಸಿದ ನ್ಯೂಟ್ರಿಸಿರಿಯಲ್ಲ್ ಮತ್ತು ದ್ವಿದಳ ಧಾನ್ಯ ಪ್ರಮಾಣಿತ ಬೀಜಗಳಿಗೆ ಒಟ್ಟಾರೆ ರೂ.10.38 ಕೋಟಿ ಪ್ರೋತ್ಸಾಹ ಧನ ಪಡೆಯಲಾಗಿದೆ. ಆದಷ್ಟು ಬೇಗ ಪೂರ್ಣಗೊಳಿಸುವ ಜತೆಗೆ 2025-26ನೇ ಸಾಲಿನಲ್ಲಿ ರೈತರಿಗೆ ನಿಯಮಿತವಾಗಿ ಬಿತ್ತನೆ ಬೀಜ ಪೂರೈಸುವಲ್ಲಿ ಯಾವುದೇ ವ್ಯತ್ಯಯ ವಾಗದಂತೆ ಸಚಿವ ಚಲುವರಾಯಸ್ವಾಮಿ ತಿಳಿಸಿದರು. ಕೃಷಿ ಇಲಾಖೆ ಕಾರ್ಯದರ್ಶಿ ಡಾ. ರವಿಶಂಕರ್, ಆಯುಕ್ತ ವೈ.ಎಸ್. ಪಾಟೀಲ್, ಕರ್ನಾಟಕ ಬೀಜ ನಿಗಮದ ವ್ಯವಸ್ಥಾಪಕ ನರ್ದೇಶಕ ದೇವರಾಜ್ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

Hosadiganta pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in

Times of Ind pg 04

This Valentine's, world is saying it all with B'luru roses

Yashaswini.Sri
@timesofindia.com

Bengaluru: As love fills the air, millions of roses from Bengaluru are soaring across the globe to meet the Valentine's Week demand. Karnataka's capital, often called India's 'rose hub', is witnessing a floral frenzy as growers and exporters rush to ship fresh blooms to markets worldwide.

ROSE DAY 2025

According to International Flower Auction Bengaluru (IFAB), which brings sellers and buyers on to a common platform to facilitate the export of high-quality cut flowers every day, 6 lakh stemmed roses have been sold or auctioned daily on an average since Feb 1.

TOP 3 cities in domestic market
- Delhi
- Hyderabad
- Kolkata

TOP 3 varieties in market
- Red
- Peach
- White

Photo for representation



> While red roses are all-time favourites for the crowd, there has been a steady inclination towards peach and white roses. While these are the favourites, orange roses are least favoured. Red is for love, while pastel shades like white and peach are for weddings. Orange doesn't have a strong tie to major life events or holidays...
>
> **Srikanth Bollapally** | PRESIDENT, GLOBAL FLOWER COUNCIL OF INDIA

Bengaluru roses are being exported to all European countries, besides Malaysia, Singapore, Dubai, the UAE, and Sri Lanka. But why are they so popular? The city's roses are prized for their beautiful colours, long stems, and extended vase life, thanks to Bengaluru's ideal climate and innovative floriculture techniques. M Vishwanath, MD of IFAB, explained: "Valentine's season is a big driver, but weddings across the country are also fuelling the demand for roses. Exports are another major factor. As we check with our growers, they've received strong enquiries from international buyers. Export shipments typically peak from Feb 7 or 8, and this year is no different. The bulk of shipments will go out on 8, 9, 10, and 11 this month. Growers are seeing good demand and prices are looking strong. It's shaping up to be a great season."

With Valentine's Day just around the corner, the demand is expected to peak on Feb 11 and 12. "I'm expecting more than 11 lakh stems to move this week alone. Valentine's demand always surges and this year looks even better." The prices of single-stemmed roses have increased by 75%, Vishwanath told **TOI**. "Last year, a single-stemmed rose was priced at an average of Rs 8; now it has increased to Rs 14, which has boosted our export sales."

Production up too

Florists and wholesalers are working round the clock to fulfil orders from destinations around the globe. Veena AM, assistant general manager, IFAB, said, "While the Netherlands and other countries of Europe are the highest consumers of Bengaluru's roses, this year it has been Malaysia, followed by Singapore and Sri Lanka."

Srikanth Bollapally, president of Global Flower Council of India, highlighted that there was a 20% increase in production of roses in the city this year. "Over the years, Bengaluru's market has brought a diversity of colours in its production as well."

However, Srikanth told **TOI** that compared to the international market, Bengaluru's roses do well in domestic markets. "With export charges and GST, the international market hasn't been so great. The domestic market, on the other hand, has both Valentine's Day and wedding season happening at the same time. European countries are one of the biggest markets for us because Europe has a harsh winter during Valentine's Day, which leads to a drop in production of their roses."

Horticulture output set to hit 362mt in 2024-25, up 2%

New Delhi: Horticulture production in India during the 2024-25 crop year is estimated to be 362 million tonnes, which is 2% higher than the output in 2023-24, shows the agriculture ministry data released on Thursday. The higher output in the current year is expected despite marginally lower acreage in 2024-25 compared to the previous year.

Fruits, vegetables, flowers, plantation produce and spices are part of the horticulture basket. Output of all these produce put together was around

The higher output in the current year is expected despite marginally lower acreage in 2024-25 compared to the previous year

355 million hectares in 2023-24.

Vegetable production in 2024-25 is estimated to be 214 million tonnes, which is nearly seven million tonnes higher than its output in the previous year. Among vegetables, production of key kitchen staples — tomato, onion and potato — is estimated to be higher in 2024-25, compared to 2023-24.

As far as fruits are concerned, their output is estimated at 113 million tonnes in 2024-25, which is around 2.5 lakh tonnes higher than its production in 2023-24. Higher output of fruits is attributed to increased production of mango, grape and banana during the current year. TNN

Times of Ind Pg 10

ವಿಶಿಷ್ಟ ರುಚಿಯ ಸವಣೂರು ವೀಳ್ಯದೆಲೆ | ಸಂಶೋಧನೆ ನಿರತ ವಿಜ್ಞಾನಿಗಳ ತಂಡದ ಯತ್ನ

ಜಿಐ ಟ್ಯಾಗ್ ಪಡೆಯಲು ದಾಖಲೆ ಕೊರತೆ

■ ಗುರುದತ್ತ ಭಟ್ ಹಾವೇರಿ
gurudatta.bhat@timesofindia.com

ವಿಶ್ವ ಪ್ರಸಿದ್ಧ ಸವಣೂರು ವೀಳ್ಯದೆಲೆಗೆ ಭೌಗೋಳಿಕ ಮಾನ್ಯತೆ (ಜಿಐ ಟ್ಯಾಗ್) ದೊರಕಿಸಲು ಐತಿಹಾಸಿಕ ದಾಖಲೆಗಳ ಕೊರತೆ ಅಡ್ಡಿಯಾಗುತ್ತಿದೆ. ವೀಳ್ಯದೆಲೆಯ ವೈಜ್ಞಾನಿಕ ಸಂಶೋಧನೆಯನ್ನು ಯಶಸ್ವಿಯಾಗಿ ನಡೆಸುತ್ತಿರುವ ವಿಜ್ಞಾನಿಗಳು ದಾಖಲೆಗಳ ಹುಡುಕಾಟ ಆರಂಭಿಸಿದ್ದಾರೆ.

ಸವಣೂರು ವೀಳ್ಯದೆಲೆ ವಿಶಿಷ್ಟವಾದ ರುಚಿಯಿಂದ ಪ್ರಸಿದ್ಧಿ ಪಡೆದಿದೆ. ಕೆಲವೇ ವರ್ಷದ ಹಿಂದಿನವರೆಗೆ ಪಾಕಸ್ತಾನದ ಕರಾಚಿ ಸೇರಿದಂತೆ ವಿದೇಶಗಳಿಗೂ ವೀಳ್ಯದೆಲೆ ರಫ್ತಾಗುತ್ತಿತ್ತು. ಈಗಲೂ ದಿಲ್ಲಿ, ಮುಂಬಯಿ, ಅಹಮದಾಬಾದ್, ಹೈದರಾಬಾದ್ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಬೇಡಿಕೆ ಇದೆ. ಸವಣೂರು ತಾಲೂಕಿನ ಸೀಮಿತ ಪ್ರದೇಶ ದಲ್ಲಷ್ಟೇ ಬೆಳೆಯುವ ಈ ವೀಳ್ಯದೆಲೆಗೆ ಜಿಯೋ ಟ್ಯಾಗ್ ಒದಗಿಸುವ ಉದ್ದೇಶ ದೊಂದಿಗೆ ಬಾಗಲಕೋಟೆಯ ತೋಟಗಾರಿಕಾ ವಿವಿಯ ವಿಜ್ಞಾನಿಗಳು, ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ಸಹಯೋಗದಲ್ಲಿ ಪ್ರಯತ್ನ ನಡೆಸಿದ್ದಾರೆ.

ಕವಾಡಿ ಕಾಲರ್ಡು: ಸವಣೂರಿನ ಕೆಳ ಬರುವ ಈ ಐತಿಹಾಸಿಕ ವಿದ್ಯಮಾನಕ್ಕೆ ನವಾಬರು 1650 ರಿಂದ 1948ರವರೆಗೂ ಸವಣೂರು ಪಟ್ಟಣ ಕೇಂದ್ರವಾಗಿಸಿಕೊಂಡು ಆಡಳಿತ ನಡೆಸಿದ್ದಾರೆ. ನವಾಬರು ಸುಮಾರು 250-300 ವರ್ಷಗಳ ಹಿಂದೆ ಅವರೂಪದ ವೀಳ್ಯದೆಲೆಯ ತಳಿಯನ್ನು ಗುಜರಾತ್‌ದಿಂದ ತಂದು ಬೆಳೆಸಿದ್ದಾರೆ. ಇಲ್ಲಿನ ಹವಾಗುಣಕ್ಕೆ ವೀಳ್ಯದೆಲೆ ವಿಶಿಷ್ಟವಾದ ರುಚಿ ಪಡೆಯಿತು ಎಂಬ ಪ್ರತೀತಿ ಇದೆ. ಆದರೆ ಜನರ ಮಾತಿನಲ್ಲಿ ಲಿಖಿತ ದಾಖಲೆಗಳು ಈವರೆಗೆ ತೋಟಗಾರಿಕೆ ವಿಜ್ಞಾನಿಗಳಿಗೆ ಸಿಕ್ಕಿಲ್ಲ.

ದಾಖಲೆ ಅತ್ಯಗತ್ಯ: ಭೌಗೋಳಿಕ ಮಾನ್ಯತೆ ಪಡೆಯುವ ತಳಿಗಳು ವೈಜ್ಞಾನಿಕವಾಗಿ ಹಲವು ಪರೀಕ್ಷೆಗೆ ಒಳಪಡುತ್ತವೆ. ಬೆಳೆ ಬೆಳೆಯುವ ಪ್ರದೇಶದ ಮಣ್ಣಿನ ಪರೀಕ್ಷೆ, ಬೆಳೆಯುವ ವಿಧಾನ, ನೀರು, ಹವಾಗುಣ, ಬೆಳೆಯಲ್ಲಿನ ರಾಸಾಯನಿಕ ಸಂಯೋಜನೆ ಮೊದಲಾದ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಇದೆಲ್ಲದರ ಜತೆಗೆ ನಿರ್ದಿಷ್ಟ ಬೆಳೆ ಆ ಪ್ರದೇಶದಲ್ಲಿ ಮಾತ್ರ ಬೆಳೆಯುತ್ತಿರುವ ಬಗ್ಗೆ ಐತಿಹಾಸಿಕ ದಾಖಲೆಗಳು ಬೇಕೇ ಬೇಕು.

"ಸವಣೂರು ವೀಳ್ಯದೆಲೆಯ ಬಳ್ಳಿಗಳನ್ನು ಬೇರೆ ಯಾವ ಪ್ರದೇಶದಲ್ಲಿ ಬೆಳೆಸಿದರೂ ಈ ರುಚಿ ಸಿಗುವುದಿಲ್ಲ. ಸವಣೂರಿನ ಮಣ್ಣಿನ ಗುಣ ಮತ್ತು ಹವಾಮಾನದ ಕಾರಣಕ್ಕೆ ಈ ರುಚಿ ಇಲ್ಲಿ ಮಾತ್ರ ಸಿಗುತ್ತಿದೆ. ರುಚಿಯ ವೈಶಿಷ್ಟ್ಯದ ಆಧಾರದಲ್ಲಿ ಈ ವೀಳ್ಯದೆಲೆಯ ರಾಸಾಯನಿಕ ಸಂಯೋಜನೆಯೂ ಇತರ ವೀಳ್ಯದೆಲೆಗಿಂತ ಪ್ರತ್ಯೇಕವಾಗಿರುತ್ತವೆ. ಈ ವೈಜ್ಞಾನಿಕ ಅಂಶಗಳ ಸಂಶೋಧನೆ ನಡೆಸಿ ವರದಿ ನೀಡುವುದು ಕಷ್ಟದ್ದಲ್ಲ. ಆದರೆ ಐತಿಹಾಸಿಕ ದಾಖಲೆಗಳು ಸಿಗುವುದೇ ಸವಾಲಾಗಿದೆ." ಎಂದು ಸಂಶೋಧನಾ ತಂಡದ ಮುಖ್ಯಸ್ಥ ತೋಟಗಾರಿಕಾ ವಿಜ್ಞಾನಿ ಡಾ. ಲಕ್ಷ್ಮಣ ಕುಕನೂರ ತಿಳಿಸಿದರು.

ವಿಜ್ಞಾನಿಗಳ ತಂಡ ಈಗಾಗಲೇ ಬ್ರಿಟಿಷ್ ಗೆಜೆಟಿಯರ್, ಹಳೆಯ ಕಡತಗಳು, ಇತಿಹಾಸದ ಮಸ್ತಕಗಳು, ನವಾಬರ ಕಾಲದ ದಾಖಲೆಗಳನ್ನು ತಡಕಾಡಿದೆ. ವೀಳ್ಯದೆಲೆ ಬೆಳೆಯ ಕುರಿತು ಒಂದಿಲ್ಲೊಂದು ಕಡೆ ಒಂದೇ ಒಂದು ವಾಕ್ಯವಾದರೂ ಸಿಗುವ ಆಶಯ ವಿಜ್ಞಾನಿಗಳ ತಂಡದ್ದು.



ಭೌಗೋಳಿಕ ಮಾನ್ಯತೆಯ ನಿಮಿತ್ತ ಸವಣೂರಿನ ವೀಳ್ಯದೆಲೆಯ ತೋಟಗಳ ಸಮೀಕ್ಷೆ ನಡೆಸುತ್ತಿರುವ ವಿಜ್ಞಾನಿಗಳ ತಂಡ.

7 ಜನರ ತಂಡದಿಂದ ಕೆಲಸ

ಸವಣೂರು ತಾಲೂಕಿನಲ್ಲಿ ಸುಮಾರು 400 ಹೆಕ್ಟೇರ್ ಪ್ರದೇಶದಲ್ಲಿ ವೀಳ್ಯದೆಲೆ ಬೆಳೆಯಲಾಗುತ್ತದೆ. ಪ್ರತಿ ವಾರ ಸರಾಸರಿ 60 ಲಕ್ಷ ವೀಳ್ಯದೆಲೆಗಳು ಎಪಿಎಂಸಿ ಮೂಲಕ ಮಾರಾಟವಾಗುತ್ತದೆ. ವೀಳ್ಯದೆಲೆಗೆ ಭೌಗೋಳಿಕ ಮಾನ್ಯತೆ ದೊರಕಿಸಲು 7 ಜನರ ತಂಡ ನಿರಂತರ ಕಾರ್ಯಪ್ರವೃತ್ತವಾಗಿದೆ.

ಸವಣೂರು ವೀಳ್ಯದೆಲೆಗೆ ಭೌಗೋಳಿಕ ಮಾನ್ಯತೆ ದೊರಕಿಸುವ ನಿಟ್ಟಿನಲ್ಲಿ ಐತಿಹಾಸಿಕ ದಾಖಲೆಗಳನ್ನು ಹುಡುಕುತ್ತಿದ್ದೇವೆ. ಈ ಬಗ್ಗೆ ನಿರಂತರವಾಗಿ ನಮ್ಮ ಪ್ರಯತ್ನ ಸಾಗಿದೆ.

-ಡಾ. ಲಕ್ಷ್ಮಣ ಕುಕನೂರ
ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕರು, ತೋಟಗಾರಿಕೆ ವಿವಿ, ಬಾಗಲಕೋಟೆ

V-karnataka Pg 08

Viswavani Pg 12

ಬಹುಪಯೋಗಿ ಅಣಬೆ

ಕೆ. ಶ್ರೀನಿವಾಸರಾವ್, ಹರಪನಹಳ್ಳಿ.



ಅಣಬೆ, ನಾಯಿಕೊಡೆ, ಮಶ್ರೂಂ ಎಂದೆಲ್ಲ ಕರೆಯಲ್ಪಡುವ ಇದು ಶಿಲೀಂಧ್ರ ತಿರುಳಿನಿಂದ ಕೂಡಿದ ಬೀಜಕಗಳ ಹಣ್ಣಿನಂತಹ ಆಕೃತಿಯೊಂದಿದೆ. ದುಂಡಗೆ, ಮೊಟ್ಟೆ, ಗಂಟುಗಂಟು ರೂಪದಲ್ಲಿ ಬೆಟ್ಟ ಗುಡ್ಡ, ಪರ್ವತ, ಕೊರಕಲು, ಗೊಬ್ಬರದ ರಾಶಿ, ಕಾಡಿನಲ್ಲಿ ಮರಗಳ ಮೇಲೆ ಕಾಣಸಿಗುತ್ತವೆ.ಕ್ರಿ. ಶ.600ರಲ್ಲಿ ಏಷ್ಯಾ ಖಂಡ ಹಾಗೂ ನೆದರ್‌ಲ್ಯಾಂಡ್ ದೇಶಗಳಲ್ಲಿ ಗೋಚರಿಸಿದ ಈ ಬೆಳೆ ಕೆಲ ವರ್ಷಗಳಲ್ಲಿಯೇ ಜಗತ್ತಿನಾದ್ಯಂತ ಜನಪ್ರಿಯವಾಯಿತ್ತು.ಈಜಿಪ್ಟ್ ದೇಶದಲ್ಲಿ ಇದನ್ನು ಈಗಲೂ ದೇವರ ಆಹಾರ ಎಂದು ಪೂಜಿಸಿ ಹಬ್ಬ, ಜಾತ್ರೆಗಳಲ್ಲಿ ಉಪಯೋಗಿಸುತ್ತಾರೆ.

ಅಣಬೆ ಉಪಯೋಗ: ಅಣಬೆ ತಾಜಾ ತರಕಾರಿಯಷ್ಟೇ ದೇಹಕ್ಕೆ ಪೌಷ್ಟಿಕಾಂಶವನ್ನು ಒದಗಿಸುತ್ತದೆ.ಅದ್ದೂರಿ ಮದುವೆಗಳಲ್ಲಿ ವಿಶೇಷವಾಗಿ ಇದರಿಂದ ಆಹಾರ ತಯಾರಿಸುತ್ತಾರೆ.

ಅಣಬೆಯ ಔಷಧೀಯ ಗುಣಗಳು: ಅತ್ಯಧಿಕ ಪ್ರೋಟೀನ್, ಅಮೈನೋ ಆಮ್ಲ, ವಿಟಮಿನ್ ಡಿ, ಬಿ1, ಬಿ2, ಬಿ9, ಬಿ ಸಿ ಮೊದಲಾದ ಹಲವು ಜೀವಸತ್ವಗಳನ್ನು ಹೊಂದಿರುವ ಅಣಬೆಯು ಹೃದಯದ ಕಾಯಿಲೆ, ಕ್ಯಾನ್ಸರ್, ಥೈರಾಯಿಡ್, ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಂಧಿವಾತ, ಚರ್ಮರೋಗ, ನ್ಯೂಟ್ರಿಷನ್ ಕೊರತೆಗಳನ್ನೂ ಹೋಗಲಾಡಿಸುತ್ತದೆ. ಕ್ಯಾಲೋರಿಗಳನ್ನು ಕಡಿತಗೊಳಿಸಿ ತೂಕ ಕಡಿಮೆ ಮಾಡುತ್ತದೆ. ಉರಿಯೂತ, ಕೂದಲು ಉದುರುವಿಕೆ, ರಕ್ತನಾಳಗಳ ಆರೋಗ್ಯ ವೃದ್ಧಿ, ಮೆದುಳಿನ ಸ್ವಾಸ್ಥ್ಯ, ಜೀರ್ಣಕ್ರಿಯೆಗಳಲ್ಲಿ ಅದು ಪ್ರಮುಖ ಪಾತ್ರ ವಹಿಸುತ್ತದೆ.

ಆಹಾರದಲ್ಲಿ ಬಳಕೆ: ಅಣಬೆ ಸಸ್ಯವಾದರೂ ಸಸ್ಯಾಹಾರಿ, ಮಾಂಸಾಹಾರಿ ಎರಡೂ ಆಹಾರ ತಯಾರಿಕೆಯಲ್ಲಿ ಅದರಲ್ಲೂ ಉತ್ತರ ಭಾರತದ ತಿನಿಸುಗಳಲ್ಲಿ ಹೆಚ್ಚಾಗಿ ಬಳಕೆಯಾಗುತ್ತದೆ. ಫ್ರೈಡ್ ರೈಸ್, ಮಂಚೂರಿ, ಸೂಪ್, ಪರೋಟ, ಪಕೋಡ, ಇನ್ನಿತರೆ ಆಹಾರ ತಯಾರಿಕೆಯಲ್ಲಿ ಅಣಬೆಯನ್ನು ಉಪಯೋಗಿಸುತ್ತಾರೆ.

ಸೌಂದರ್ಯ ವರ್ಧಕವಾಗಿಯೂ ಬಳಕೆ: ಸೌಂದರ್ಯ ಸಾಧನಗಳು, ಮುಖಕ್ಕೆ ಲೇಪಿಸುವ ಕ್ರೀಮುಗಳಲ್ಲಿ ಅಣಬೆ ಬಳಕೆಯಾಗುತ್ತದೆ.ಫ್ಯಾಷನ್ ಡಿಸೈನಿಂಗ್, ಮಾಡೆಲಿಂಗ್, ಕೃತಕ ಒಡವೆ ತಯಾರಿಕೆ, ರೂಪದರ್ಶಿಯರ ವಸ್ತ್ರವಿನ್ಯಾಸಗಳಲ್ಲೂ ಅಣಬೆ ಉಪಯುಕ್ತ.

ನೆನಪಿಡಿ: ಕೆಂಪು ಕಾಂಡ, ಕೆಂಪು ಟೋಪಿ ಇರುವ ಅಣಬೆಗಳು ವಿಷಕಾರಿ.ಹಳೆಯ ಅಣಬೆ ಯಾವುದೇ ಕಾರಣಕ್ಕೂ ತಿನ್ನಬೇಡಿ. ತಾಜಾ ತಿನ್ನಿ.

ಅಪಾಯಕಾರಿ ಕಪ್ಪೆ



ಅಮೇಜಾನ್‌ನ ಮಳೆಕಾಡಿನಲ್ಲಿರುವ 'ಆರೋ ಫ್ರಾಗ್'ಗಳನ್ನು ಜಗತ್ತಿನ ವಿಷಕಾರಿ ಕಪ್ಪೆಗಳೆಂದು ಘೋಷಿಸಲಾಗಿದ್ದು, ಈ ಕಪ್ಪೆಗಳನ್ನು ಮುಟ್ಟುವುದೂ ಕೂಡ ಅಪಾಯಕಾರಿ. ಅವುಗಳ ದೇಹದಲ್ಲಿನ ಪಸಿ ವಿಷವೂ ಸಹ ಮನುಷ್ಯನನ್ನು ಕೊಲ್ಲುವಷ್ಟು ಸಾಮರ್ಥ್ಯ ಹೊಂದಿದೆ. ಪ್ರತೀ ಕಪ್ಪೆಯ ದೇಹದಲ್ಲೂ ಅಂದಾಜು 10000 ಇಲಿಗಳನ್ನು ಕೊಲ್ಲುವಷ್ಟು ವಿಷ ಸಂಗ್ರಹವಾಗಿರುತ್ತದೆ. 'ಡೆಂಡ್ರೋಬೇಟ್ಸ್ ಟಿನ್ಕೋರಿಯಸ್' ಎಂಬ ವೈಜ್ಞಾನಿಕ ಹೆಸರುಳ್ಳ 'ಡೆಂಡ್ರೋಬೇಟಿಡೆ' ಕುಟುಂಬದ ಉಭಯವಾಸಿ ಪಂಗಡದ ಈ ಕಪ್ಪೆಗಳು ಸದಾಕಾಲ ತೇವಾಂಶವುಳ್ಳ ಜವುಗು ಪ್ರದೇಶಗಳನ್ನು ಇಷ್ಟಪಡುವಂತವುಗಳಾಗಿದ್ದು ಹೆಚ್ಚಾಗಿ ಮಧ್ಯ ಹಾಗೂ ದಕ್ಷಿಣ ಅಮೇರಿಕಾದ ಮಳೆ ಬೀಳುವ ಕಾಡುಗಳಲ್ಲಿನ ಕೆಸರು, ತಗ್ಗುಪ್ರದೇಶ ಹಾಗೂ ಕೊಳಗಳಲ್ಲಿ ಕಂಡುಬರುತ್ತವೆ. ಉಷ್ಣವಲಯದ ಬೊಲೊಯಾ, ವೆನುಜುವೆಲಾ, ಪ್ರೆಂಚ್ ಗಯಾನ, ಪೆರು, ಪನಾಮಾ ಪ್ರದೇಶಗಳಲ್ಲಿ ಕಾಣಸಿಗುತ್ತವೆ. ಹೆಚ್ಚಾಗಿ ನೆಲಕ್ಕೆ ಆಂಟಿಕೊಂಡೇ ವಾಸಿಸುವ ಇವು ಕೆಲವೊಮ್ಮೆ ನೆಲದಿಂದ 10 ಮೀಟರುಗಳಷ್ಟು ಎತ್ತರದವರೆಗೂ ಮರಗಳನ್ನೇರಿ ಕೀಟಗಳನ್ನು ಬೇಟೆಯಾಡುತ್ತಿರುತ್ತವೆ. ಸಾಕಷ್ಟು ಸಣ್ಣಗಾತ್ರದ ಈ ಕಪ್ಪೆಗಳು 1.5 ಸೆಂ.ಮೀ.ನಿಂದ 6 ಸೆಂ.ಮೀಗಳಷ್ಟು ಉದ್ದವಿರುತ್ತವೆ.

ಇವುಗಳು ನೋಡಲು ಆಕರ್ಷಕವಾಗಿದ್ದು ಹಳದಿ, ಕೆಂಪು, ಕೇಸರಿ, ನೀಲಿ, ಹಸಿರು, ಕಪ್ಪು ಮೈ ಬಣ್ಣಗಳಿಂದ ಕೂಡಿರುತ್ತವೆ. ವಿಶೇಷವೆಂದರೆ ಇವುಗಳ ಮೈಬಣ್ಣದ ಗಾಢತೆ ಹೆಚ್ಚಿದ್ದಷ್ಟೂ ಅವುಗಳು ಹೆಚ್ಚು ವಿಷಕಾರಿ. ತನ್ನ ಮೇಲೆ ದಾಳಿ ಮಾಡಲು ಪ್ರಯತ್ನಿಸುವ ಶತ್ರುಗಳಿಗೆ ಇದು ತನ್ನ ಮೈಬಣ್ಣದಿಂದಲೇ ತಾನೆಷ್ಟು ಅಪಾಯಕಾರಿಯೆಂಬುದನ್ನು ಸೂಚಿಸುತ್ತದೆಯಂತೆ.

ಅಲ್ಲಿ ಚೆರ್ರಿ ಹೂವು ಅರಳಿದರೆ ಜಗತ್ತಿಗೆಲ್ಲ ಪುಳಕ!



ನೂರೆಂಟು ವಿಶ್ವ

ವಿಶ್ವೇಶ್ವರ ಭಟ್


vbhat@me.com

ಜಪಾನ್ ಯಾವುದಕ್ಕೆ ಪ್ರಸಿದ್ಧ?

ಈ ಪ್ರಶ್ನೆಯನ್ನು ಹತ್ತು ಮಂದಿಗೆ ಕೇಳಿದರೆ, ಇಪ್ಪತ್ತು ಬೇರೆ ಬೇರೆ ಉತ್ತರಗಳು ಹೊರಹೊಮ್ಮಬಹುದು. ತಮಾಷೆಯೆಂದರೆ, ಇವೆಲ್ಲವೂ ಸರಿಯೇ. ಕೆಲವರು ಎಲೆಕ್ಟ್ರಾನಿಕ್ ವಸ್ತುಗಳಿಗೆ, ಕಂಪ್ಯೂಟರುಗಳಿಗೆ ಪ್ರಸಿದ್ಧ ಎಂದು ಹೇಳಬಹುದು. ಇನ್ನು ಕೆಲವರು ಕಾರುಗಳಿಗೆ (ಅಜೋಮೊಬೈಲ್) ಪ್ರಸಿದ್ಧ ಎನ್ನಬಹುದು. ಮತ್ತೆ ಕೆಲವರು ಹೊಸ ಹೊಸ ಆವಿಷ್ಕಾರಗಳಿಗೆ ಎಂದು ಹೇಳಬಹುದು. ಭೂಕಂಪ ಸೇರಿದಂತೆ ನೈಸರ್ಗಿಕ ಪ್ರಕೋಪಗಳಿಗೂ ಜಪಾನ್ ಹೆಸರುವಾಸಿ ಎನ್ನುವವರೂ ಇದ್ದಾರೆ. ಜಪಾನ್ ಅಂದ್ರೆ ಬುಲೆಟ್ ಟ್ರೇನ್ ಎಂದು ಹೇಳುವವರು ಸಹ ಇದ್ದಾರೆ. ಜಪಾನ್ ಅಂದ ಕೂಡಲೇ ನಮ್ಮ ಕಣ್ಣು ಮುಂದೆ ಬರುವುದು ಸ್ವಚ್ಛತೆ, ಶಿಸ್ತು, ಪ್ರಾಮಾಣಿಕತೆ, ಸ್ವಾವಲಂಬನೆ ಎಂದೂ ಹೇಳಬಹುದು. ಜಪಾನ್ ಅಂದ್ರೆ ಪ್ರಾಚೀನ ಮತ್ತು ಆಧುನಿಕಗಳ ಕೂಡುತಾಣ ಎಂದರೂ ಸರಿಯೇ. ಜಪಾನ್ ಅಂದ್ರೆ ವೆಂಡಿಂಗ್ ಮಷೀನುಗಳ ಮೆಕ್ಕಾ ಅಂತ ಹೇಳುವವರೂ ಇದ್ದಾರೆ. ನಿಜ, ಜಪಾನ್ ಎಂದಾಗ ಈ ಎಲ್ಲ ಚಿತ್ರಣಗಳ ಜಾಥಾ ಮೆರವಣಿಗೆ ನಮ್ಮ ಮುಂದೆ ಸಾಗುವುದು ಸಾಮಾನ್ಯ. ಆದರೆ ಜಪಾನ್ ಅಂದ ತಕ್ಷಣ ಇನ್ನೊಂದು ದೃಶ್ಯ ನೆನಪಾಗುತ್ತದೆ.

ಅದು ಚೆರ್ರಿ ಮರಗಳು ಅಥವಾ ಚೆರ್ರಿ ಹೂವುಗಳು!

ಹೌದು, ಜಪಾನಿನಲ್ಲಿ ಚೆರ್ರಿ ಹೂವುಗಳು ಅರಳಿದರೆ, ಅದು ಇಡೀ ವಿಶ್ವದ ಗಮನವನ್ನು ಸೆಳೆಯುತ್ತವೆ. ಹಾಗಂತ ಚೆರ್ರಿ ಹೂವುಗಳು ಜಪಾನಿನಲ್ಲೊಂದೇ ಅರಳುವುದಿಲ್ಲ. ಸಾಮಾನ್ಯವಾಗಿ ಜಗತ್ತಿನ ಎಲ್ಲ ದೇಶಗಳಲ್ಲೂ ಚೆರ್ರಿ ಹೂವುಗಳು ಬಿಡುತ್ತವೆ. ಭಾರತ ಸೇರಿದಂತೆ ದಕ್ಷಿಣ ಕೊರಿಯಾ, ಚೀನಾ, ಸ್ಪೇನ್, ಜಾರ್ಜಿಯಾ, ಕೆನಡಾ, ಸ್ವೀಡನ್, ಅಮೆರಿಕ, ಫ್ರಾನ್ಸ್, ತೈವಾನ್,, ಥೈಲ್ಯಾಂಡ್, ಆಸ್ಟ್ರೇಲಿಯಾ, ಬ್ರೆಜಿಲ್, ಸಿಂಗಾಪುರ, ಜರ್ಮನಿ ಮುಂತಾದ ದೇಶಗಳಲ್ಲೂ ಚೆರ್ರಿ ಹೂವುಗಳನ್ನು ಕಾಣಬಹುದು. ನಮ್ಮ ದೇಶದ ಜಮ್ಮು-ಕಾಶ್ಮೀರ, ಮೇಘಾಲಯದ ಶಿಲ್ಲಾಂಗ್, ನಾಗಾಲ್ಯಾಂಡಿನ ಕೊಹಿಮಾ, ಹಿಮಾಚಲ ಪ್ರದೇಶದ ನಾರಕಂಡ್, ಸಿಕ್ಕಿಂನ ಗ್ಯಾಂಗ್ಟಕ್‌ಗಳಲ್ಲೂ ಚೆರ್ರಿ ಹೂವುಗಳು ಬಿಡುತ್ತವೆ. ಆದರೂ ಇವ್ಯಾವುವೂ ಜಾಗತಿಕ ಪ್ರಸಿದ್ಧಿಯನ್ನು ಪಡೆದಿಲ್ಲ. ಚೆರ್ರಿ ಹೂವುಗಳನ್ನು ನೋಡಲು ಈ ಊರುಗಳಿಗೆ ಯಾರೂ ಹೋಗುವುದಿಲ್ಲ. ಆದರೆ ಈ ಹೂವುಗಳು ನಿಜಕ್ಕೂ ಕಮಾಲು ಕಟ್ಟುವುದು, ಆಗಸಕ್ಕೆ ಚಿಪ್ಪರ ಹಾಸುವುದು ಜಪಾನಿನಲ್ಲಿ ಮಾತ್ರ.



ಹೀಗಾಗಿ ಅಲ್ಲಿ ಚೆರ್ರಿ ಹೂವು ಅರಳಿದರೆ ಅದು ಇಡೀ ಜಗತ್ತಿಗೇ ವಸಂತಕಾಲ. ಅಲ್ಲಿ ಆ ಹೂವು ಅರಳುವುದನ್ನು ನೋಡಲು ಜನ ವರ್ಷದ ಮೊದಲೇ ಸಿದ್ಧತೆ ಮಾಡತೊಡ ಗುತ್ತಾರೆ. ಒಂದು ದೇಶ ಒಂದು ಹೂವಿನ ಮೂಲಕವೂ ಸಮಸ್ತ ಜಗತ್ತಿನ ಗಮನವನ್ನು ಸೆಳೆಯಬಹುದು ಎಂಬುದನ್ನು ಜಪಾನ್ ಚೆರ್ರಿ ಹೂವಿನ ಮೂಲಕ ಸಾಬೀತುಪಡಿಸಿದೆ. ಅಲ್ಪಕಾಲಿಕ ಚೆರ್ರಿ ಹೂವು ಮಾಡಿದ ಪವಾಡದ ರೀತಿಯಲ್ಲಿ ಬೇರೆ ಯಾವುದೇ ಹೂವು ಕೂಡ ಇಡೀ ವಿಶ್ವದ ಮನಸ್ಸಿನ ಮೇಲೆ ಪ್ರಭಾವ ಬೀರಿಲ್ಲ ಎಂಬುದು ಸಹ ಸತ್ಯ. ಚೆರ್ರಿ ಹೂವುಗಳು ಅಥವಾ ಸಕುರಾ ಪ್ರಪಂಚದ ಉಳಿದ ಭಾಗಗಳಿಗೆ ಜಪಾನಿನ ಸೌಂದರ್ಯ ಮತ್ತು ಸೌಂದರ್ಯದ ಅನಧಿಕೃತ ಸಂಕೇತವಾಗಿರುವುದೂ ಸಹ ಆಷ್ಟೇ ನಿಜ. ಇದು ಆ ದೇಶದ ಅತ್ಯಂತ ಪ್ರತಿಷ್ಠಿತ ಮತ್ತು ಪ್ರೀತಿಯ ಪ್ಯಾಕೃತಿಕ ಚಿಮ್ಮಿಕೆಯೂ ಹೌದು. ಸಕುರಾ ಕೇವಲ ಒಂದು ಹೂವಿನ ಸೌಂದರ್ಯವನ್ನು ಮಾತ್ರ ಪ್ರತಿನಿಧಿಸುವುದಿಲ್ಲ, ಆದರೆ ಅದು ಜಪಾನ್ನ ಸಂಸ್ಕೃತಿ, ಪರಂಪರೆ ಮತ್ತು ಜೀವನದ ತಾತ್ಪರ್ಯ ಅರ್ಥಗಳನ್ನು ಸಹ ಒಳಗೊಂಡಿದೆ.

ಚೆರ್ರಿ ಹೂವುಗಳು ಅರಳುವ ಕಾಲವಿದೆಯಲ್ಲ, ಅದನ್ನು 'ಚೆರ್ರಿ ಬ್ಲಾಸಮ್' ಎಂದು ಕರೆಯುತ್ತಾರೆ. ಇದು ಜಪಾನಿನ ಶತಶತಮಾನಗಳಿಂದ ಸಂಸ್ಕೃತಿಯ ಒಂದು ಭಾಗವಾಗಿವೆ. ಚೆರ್ರಿ ಬ್ಲಾಸಮ್ 'ಸೌಂದರ್ಯ ಮತ್ತು ಸಾಂದರ್ಭಿಕ ಸಾವಿನ' ಒಂದು ಪ್ರತೀಕ ಎಂದು ಜಪಾನಿಯರು ನಂಬಿದ್ದಾರೆ. ಆಷ್ಟೇ ಅಲ್ಲ, ಈ ಹೂವುಗಳು ಸಮಯವು ಶಾಶ್ವತವಲ್ಲ, ಹೀಗಾಗಿ ಪ್ರತಿ ಕ್ಷಣವನ್ನು ನೆನಪಿನಲ್ಲಿಡಿ ಎಂಬ ಸಂದೇಶವನ್ನು ನೀಡುತ್ತವೆ. ಈ ಹೂವುಗಳು ನೈಸರ್ಗಿಕ ಸೌಂದರ್ಯವನ್ನು ಪ್ರದರ್ಶಿಸುವುದರ ಜತೆಗೆ, ಸಾಮಾಜಿಕ ಸಮುದಾಯಗಳ ಒಗ್ಗಟ್ಟಿನ ಸಂಕೇತವೂ ಆಗಿವೆ. ಚೆರ್ರಿ ಹೂವುಗಳು ಅಲ್ಲಿನ ಕಲೆ, ಕಾವ್ಯ, ಚಿತ್ರಕಲೆ ಮತ್ತು ಸಂಗೀತದ ಮೇಲೂ ಗಾಢ ಪ್ರಭಾವವನ್ನು ಬೀರಿದೆ. ಬಹಳಷ್ಟು ಹೈಕು ಮತ್ತು ವಾಕಾ ಕಾವ್ಯಗಳಲ್ಲಿ ಈ ಹೂವುಗಳನ್ನು ಪ್ರಸ್ತಾಪಿಸಲಾಗಿದೆ. ಉಕಿಯೋ-ಎ (ಖ್ಯಿಜಿಥಿಟಿ-ಥಿ) ಎಂಬ ಜಪಾನೀಸ್ ಬ್ಲಾಕ್ ಪ್ರಿಂಟ್ ಚಿತ್ರಕಲೆಯ ಮುಖ್ಯ ವಿಷಯವೇ ಚೆರ್ರಿ ಮರಗಳ ಸೌಂದರ್ಯ. 'ಸಕುರಾ ಸಕುರಾ' ಎಂಬ ಪರಂಪರಾತ್ಮಕ ಜನಪದ ಗೀತೆ ಚೆರ್ರಿ ಹೂವುಗಳ ಸ್ಮರಣಾರ್ಥವಾಗಿ ರಚಿಸಲಾಗಿದೆ.

ಜಪಾನ್ನಿಲ್ಲಿ ಚೆರ್ರಿ ಬ್ಲಾಸಮ್ ನ್ನು ಒಂದು ಹಬ್ಬವಾಗಿ ಆಚರಿಸಲಾಗುತ್ತದೆ. ಅದನ್ನು ಅವರು 'ಹಾನಾಮಿ' ಎಂದು ಕರೆಯುತ್ತಾರೆ. 'ಹಾನಾಮಿ' ಅಂದ್ರೆ 'ಹೂವಿನ ವೀಕ್ಷಣೆ' ಎಂದರ್ಥ. ಪ್ರಾಚೀನ ಕಾಲದಿಂದಲೂ ಈ ಹಬ್ಬ ಆಚರಿಸಲಾಗುತ್ತಿದ್ದು, ಜನರು ಹಸಿರು ಪಾರ್ಕ್‌ಗಳಲ್ಲಿ, ನದಿಗಳ ದಡಗಳಲ್ಲಿ ಮತ್ತು ಜಪಾನನ್ನು ಅಲಂಕರಿಸುವ ಚೆರ್ರಿ ಮರಗಳ ಕೆಳಗೆ ಕುಳಿತು, ಈ ಅಸಾಮಾನ್ಯ ಹೂವಿನ ಸೌಂದರ್ಯವನ್ನು ವೀಕ್ಷಿಸುವುದು ಸಂಪ್ರದಾಯ. ರಾಜಧಾನಿ ಟೋಕಿಯೋ ಸೇರಿದಂತೆ, ಕ್ಯೋಟೋ, ಒಸಾಕಾ, ನಾರಾ, ಹೊಕ್ಕೈಡೊ, ಹಿರೋಸಾಕಿ, ಮೌಂಟ್ ಫುಜಿ ಮುಂತಾದ ಕಡೆಗಳಲ್ಲೂ ಸಹ ಚೆರ್ರಿ ಹೂವುಗಳು ಬೆಳಿ ಬಣ್ಣದಿಂದ ಗುಲಾಬಿ ಬಣ್ಣದವರೆಗೆ ತೋರಣಗಟ್ಟುವುದನ್ನು ನೋಡುವುದೇ ನಯನಾನಂದ. ಟೋಕಿಯೋದಲ್ಲಿರುವ ಉಎನೋ ಉದ್ಯಾನದಲ್ಲಿ ಸುಮಾರು 1,200 ಸಕುರಾ ಮರಗಳಿವೆ. ಅವುಗಳಲ್ಲಿ ಬಿಟ್ಟ ಹೂವುಗಳನ್ನು ನೋಡಲು ಹಿಂದಿನ ವರ್ಷ ಮೂವತ್ತೈದು ಲಕ್ಷ ಜನ ಆಗಮಿಸಿದ್ದರು. ಹಾಗೆ ಕ್ಯೋಟೋದಲ್ಲಿರುವ ಮರುಯಾಮ ಉದ್ಯಾನದಲ್ಲಿರುವ ಸಕುರಾ ಹೂವುಗಳನ್ನು ಹದಿನೈದು ಲಕ್ಷಕ್ಕೂ ಅಧಿಕ ಪ್ರವಾಸಿಗರು ವೀಕ್ಷಿಸಿದ್ದರು. ಹಿರೋಸಾಕಿ ಕ್ಯಾಸಲ್ ಸಕುರಾ ಹೂವುಗಳು ಪ್ರತಿ ವರ್ಷ ಇಪ್ಪತ್ತು ಲಕ್ಷ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಮೌಂಟ್ ಫುಜಿ ಪರ್ವತದ ತಪ್ಪಲಿನಲ್ಲಿರುವ ಚೆರ್ರಿ ಹೂವುಗಳ ನೋಟ ಜಗತ್ತಿನಲ್ಲೇ ಅತ್ಯಂತ ಕಣ್ಣನ ನೆಳೆಯುವ ದೃಶ್ಯಗಳಲ್ಲಿ ಒಂದಾಗಿದೆ.

ಪ್ರತಿ ವರ್ಷ ಜಪಾನಿನಲ್ಲಿ ಮಾರ್ಚ್ ಎರಡನೇ ವಾರದಿಂದ ಚೆರ್ರಿ ಹೂವುಗಳು ಅರಳಲಾರಂಭಿಸಿ, ಮೇ ಮೊದಲ ವಾರದ ಹೊತ್ತಿಗೆ ಸುಮ್ಮನೆ ಉದುರಿ ಹೋಗಿದ್ದರೆ ನಾನು ಆ ಹೂವಿನ ಬಗ್ಗೆ ಬರೆಯುತ್ತಿರಲಿಲ್ಲ, ಆದರೆ ಜಪಾನ್ ಈ ಹೂವನ್ನು ಇಟ್ಟುಕೊಂಡು ಆ ಐವತ್ತು ದಿನಗಳ ಅವಧಿಯಲ್ಲಿ ತನ್ನನ್ನು ಇಡೀ ವಿಶ್ವದ ಜನರನ್ನು ಆಕರ್ಷಿಸುತ್ತಾ, ಆದನ್ನೇ ಒಂದು ಅದ್ಭುತ ಪ್ರವಾಸೋದ್ಯಮ ಅವಕಾಶವನ್ನಾಗಿ ಪರಿವರ್ತಿಸಿರುವುದು ಅಚ್ಚರಿಯ ಸಂಗತಿಯೇ. ಒಂದು ಹೂವು ಸಹ ಒಂದು ದೇಶದ ಆರ್ಥಿಕತೆಗೆ ಹೇಗೆ ಪೂರಕವಾಗಬಹುದು ಎಂಬುದಕ್ಕೆ ಚೆರ್ರಿ ಬ್ಲಾಸಮ್ ಒಂದು ಅನನ್ಯ ನಿದರ್ಶನ. ಚೆರ್ರಿ ಹೂವು ಅರಳಿದರೆ ಇಡೀ ಟೋಕಿಯೋ ನಗರ ಗುಲಾಬಿ ಬಣ್ಣಕ್ಕೆ ತಿರುಗುವ ಹಾಗೆ, ಹಣದ ಬಣ್ಣವೂ ಗುಲಾಬಿಯಾಗುತ್ತದೆ. ಆ ಸಮಯದಲ್ಲಿ ಟೋಕಿಯೋದಲ್ಲಿ ಉಳಿದು ಕೊಳ್ಳಲು ಹೋಟೆಲುಗಳಲ್ಲಿ ರೂಮುಗಳು ಸಿಗುವುದಿಲ್ಲ, ಅವೆಲ್ಲ ಆರು ತಿಂಗಳ ಮುಂಚೆಯೇ ಬುಕ್ ಆಗಿರುತ್ತವೆ. ಒಂದು ವೇಳೆ ಸಿಕ್ಕರೂ ಒಂದಕ್ಕೆ ಏಳೆಂಟು ಪಟ್ಟು ಜಾಸ್ತಿ ಹಣ ವನ್ನು ಪೀಕಬೇಕು. ಜಪಾನಿಗೆ ಮೊದಲ ಸಲ ಭೇಟಿ ನೀಡು ವವರಂತೂ ಈ ಹೂವುಗಳು ಅರಳುವುದನ್ನು ನೋಡಲೆಂದೇ ಸಮಯವನ್ನು ನಿಗದಿಪಡಿಸಿಯೇ ಆಗಮಿಸುತ್ತಾರೆ.

ಕೋವಿಡ್ ಗಿಂತ ಮುನ್ನ, ಅಂದರೆ 2019 ರಲ್ಲಿ, ಸುಮಾರು 63 ದಶಲಕ್ಷ (ಆಂದರೆ ಜಪಾನಿನ ಜನಸಂಖ್ಯೆಯ ಅರ್ಧದಷ್ಟು ಮಂದಿ) ದೇಸಿ ಮತ್ತು ವಿದೇಶಿ ಪ್ರವಾಸಿಗರು ಚೆರ್ರಿ ಹೂವುಗಳನ್ನು ನೋಡಲೆಂದು ಆ ಐವತ್ತು ದಿನಗಳ ಅವಧಿಯಲ್ಲಿ ಆಗಮಿಸಿದ್ದರೆಂದರೆ, ಅದರ ಜನಪ್ರಿಯತೆಯನ್ನು ಊಹಿಸಬಹುದು. ಕಳೆದ ವರ್ಷ ಚೆರ್ರಿ ಬ್ಲಾಸಮ್ ಸೀಸನ್ ಸುಮಾರು ಮೂವತ್ತೇಳು ಲಕ್ಷ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿತ್ತು. ಇದರಿಂದ ದೇಶದ ಆರ್ಥಿಕತೆಗೆ 2.7 ಶತಕೋಟಿ ಡಾಲರ್ (300 ಶತಕೋಟಿ ಯೆನ್) ಹಣ ಹರಿದು ಬರುವಂತಾಗಿತ್ತು. ಚೆರ್ರಿ ಬ್ಲಾಸಮ್ ಸೀಸನ್ ಮಾರ್ಚ್ ಎರಡನೇ ವಾರದಲ್ಲಿ ಆರಂಭವಾದರೂ, ಜಪಾನ್ ಅದಕ್ಕಿಂತ ಮೂರು ತಿಂಗಳ ಮುನ್ನವೇ ವಿದೇಶಿ ಪ್ರವಾಸಿಗರನ್ನು ಆಹ್ವಾನಿಸಲು ಸನ್ನದ್ಧವಾಗುತ್ತದೆ. ಇನ್ನೂರು ದಿನಗಳಲ್ಲಿ ಮಾಡುವಷ್ಟು ವ್ಯಾಪಾರ-ವ್ಯವಹಾರ-ಮಹಿವಾಟನ್ನು ಕೇವಲ ಐವತ್ತು ದಿನಗಳಲ್ಲಿ ಮಾಡಲು ಸಿದ್ಧವಾಗುತ್ತದೆ. ಯುರೋಪ್ ಮತ್ತು ಅಮೆರಿಕ ಕ್ರಿಸ್ತನ್ ಮತ್ತು ಹೊಸ ವರ್ಷಕ್ಕೆ ಹೇಗೆ ಸಿದ್ಧವಾಗುತ್ತದೋ ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಜಪಾನ್ ಚೆರ್ರಿ ಬ್ಲಾಸಮ್ ಗೆ ಸಜ್ಜಾಗುತ್ತದೆ. ಸೋಷಿಯಲ್ ಮೀಡಿಯಾ ಹುಚ್ಚು ಚೆರ್ರಿ ಬ್ಲಾಸಮ್ ನ್ನು ಇನ್ನಷ್ಟು ಜನಪ್ರಿಯಗೊಳಿಸಿರುವುದಂತೂ ಸತ್ಯ. ಕಳೆದ ವರ್ಷ ಇನ್ಸ್ಟಾಗ್ರಾಮ್ ನಲ್ಲೊಂದೇ ಮೂರು ಕೋಟಿ ಫೋಟೋ ಮತ್ತು ವಿಡಿಯೋಗಳನ್ನು ಜನ ಅಪ್ಲೋಡ್ ಮಾಡಿದ್ದರು.

ಆ ಅಲ್ಪ ಅವಧಿಯಲ್ಲಿ ಚೆರ್ರಿ ಹೂವುಗಳ ಸುತ್ತ ಜಪಾನ್ ಗಿರಕಿ ಹೊಡೆಯುತ್ತದೆ. ಇಡೀ ದೇಶ ಚೆರ್ರಿ ಹೂವುಗಳಿಂದ ಹೊಸ ಸೌಂದರ್ಯ, ಹೊಸ ರೂಪ ಪಡೆಯುವುದು ಒಂದೆಡೆಯಾದರೆ, ನಿರೀಕ್ಷೆಗೂ ಮೀರಿದ ಪ್ರಮಾಣದಲ್ಲಿ ಹಣದ ಹೊಳೆ ಹರಿದು ಬರುತ್ತದೆ. ಸಕುರಾ ಸೀಸನ್‌ಗಾಗಿ, ಹೋಟೆಲ್ ರೂಮುಗಳನ್ನು ಮೂರು ತಿಂಗಳ ಮುನ್ನವೇ ಕಾದಿರಿಸಲಾಗುತ್ತವೆ. ಎಲ್ಲ ಏರ್ ಲೈನ್ಸ್ ಫುಲ್. ಮಾರುಕಟ್ಟೆಯಲ್ಲಿ ಎಲ್ಲಿ ನೋಡಿದರೂ ಸಕುರಾ ಥೀಮ್ ಹೊಂದಿರುವ ವಸ್ತುಗಳೇ ತುಂಬಿ ಹೋಗಿರುತ್ತವೆ. ಸಕುರಾ ಅಧಿರತ ಆಹಾರ ಮತ್ತು ಪಾನೀಯಗಳನ್ನು ಅತ್ಯಂತ ಆಕರ್ಷಕವಾಗಿ ಮಾರಾಟ ಮಾಡಲಾಗುತ್ತದೆ. ಸಕುರಾ ವಿನ್ಯಾಸದ ಉಡುಪುಗಳು, ಸಕುರಾ ಗಂಧವಿತಿಪ್ತ ಚಾಕೋಲೇಟ್‌ಗಳು ಮತ್ತು ಆತ್ತರುಗಳು ಸೇರಿದಂತೆ ಸರ್ವವೂ ಸಕುರಾಮಯ! ಆಷ್ಟೇ ಅಲ್ಲ, ಚೆರ್ರಿ ಬ್ಲಾಸಮ್ ಸೀಸನ್ ಪ್ರವಾಸಿಗರಿಗೆ ಜಪಾನಿನ ಸಂಸ್ಕೃತಿಯ ದ್ವಾರವನ್ನು ತೆರೆಯುತ್ತದೆ. ಪ್ರವಾಸಿಗರು ಸಾಂಪ್ರದಾಯಿಕ ಉಡುಗೆ 'ಕಿಮೋನೋ' ಧರಿಸಿ, ಸಕುರಾ ಮರಗಳ ಸೌಂದರ್ಯವನ್ನು ಆನಂದಿಸುತ್ತಾರೆ.

ಜಪಾನ್ ಯಾವ ರೀತಿಯಲ್ಲಿ ಈ ಹೂ ಬಿಡುವ ಕಾಲವನ್ನು ಮಾರ್ಕೆಟ್ ಮಾಡುತ್ತದೆಂದರೆ, ಸಕುರಾ ಮರಗಳ ಸೌಂದರ್ಯದ ನಡುವೆ ಪ್ರವಾಸಿಗರಿಗೆ ವಿಶಿಷ್ಟ ಫೋಟೋ ಶೂಟ್ ಗಾಗಿ ಪ್ಯಾಕೇಜ್ ಟೂರ್ ಗಳನ್ನೂ ಏರ್ಪಡಿಸಲಾಗುತ್ತದೆ. 'ಜಾತ್ರೆಮೇಟಿಯಲ್ಲಿನ ಎಲ್ಲ ಅಂಗಡಿಗಳಿಗೂ ಭರ್ಜರಿ ವ್ಯಾಪಾರ' ಎಂಬಂತೆ, ಚೆರ್ರಿ ಹೂವುಗಳು ಬಿಟ್ಟಾಗ ಹಣ ಮಾಡದವನೇ ಪಾಪ! ಪ್ರವಾಸಿಗರು ವಿಭಿನ್ನ ಪ್ಯಾಂಕ್ಯಗಳಿಗೆ ಭೇಟಿ ನೀಡುವುದರಿಂದ ಸ್ಥಳೀಯ ವ್ಯಾಪಾರ, ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಗೆ ಆದಾಯ ಹೆಚ್ಚುತ್ತದೆ, ಇದರಿಂದ ಸ್ಥಳೀಯ ಆರ್ಥಿಕತೆಗೂ ಬೆಂಬಲ ದೊರೆಯುತ್ತದೆ. ಅಂದರೆ ಒಂದು ಹೂವಿನ ಸುತ್ತ ಒಂದು ದೇಶ, ತನ್ನ ಸಂಸ್ಕೃತಿಯನ್ನು ಶೋಕೇಸ್ ಮಾಡಿ, ಪ್ರವಾಸೋದ್ಯಮವನ್ನು ಒಂದು ಅದ್ಭುತ ಕಲೆಯಾಗಿ, ವಾಣಿಜ್ಯವಾಗಿ ಪರಿವರ್ತಿಸುವುದು ಆಧುನಿಕ ಜಗತ್ತಿನ ವಿಸ್ಮಯವೇ ಸರಿ. ಮಾರುಕಟ್ಟೆ ಆಧರಿತ ಆರ್ಥಿಕತೆಗೂ ಇದು ದೊಡ್ಡ ಪಾಠವೇ.

ಜಪಾನಿನಲ್ಲಿ ಚೆರ್ರಿ ಹೂವು ಅರಳುತ್ತಿದಂತೆ, ಜಗತ್ತಿನಲ್ಲಿರುವ ಎಲ್ಲ ದೊಡ್ಡ ದೊಡ್ಡ ಬ್ರಾಂಡ್ ಗಳು ತಮ್ಮ ಉತ್ಪನ್ನಗಳನ್ನು ಅರಳಿಸುವುದು ಹೇಗೆ ಎಂದು ಅಕಲು ಹಾಕೆತೊಡಗುತ್ತವೆ. ಉದಾಹರಣೆಗೆ, ಚೆರ್ರಿ ಬ್ಲಾಸಮ್ ಋತುವಿನಲ್ಲಿ, ಜಾಗತಿಕ ಬ್ರ್ಯಾಂಡ್ ಆದ ಕೋಕಾ-ಕೋಲಾ ಇತರ ಯಾವುದೇ ಸ್ಥಳೀಯ ಬ್ರ್ಯಾಂಡ್‌ಗಿಂತ ಹೆಚ್ಚು ಜಪಾನೀಸ್ ಆಗುತ್ತದೆ. ಜಿಳಗಾಲವು ಮಸಂತಕಾಲಕ್ಕೆ ತಿರುಗುತ್ತಿದ್ದಂತೆ, ದೇಶಾದ್ಯಂತ ಕೋಕಾ-ಕೋಲಾ ಬಾಟಲಿಗಳುಳ್ಳ ಕೇಸ್‌ಗಳು ಗುಲಾಬಿ ಬಣ್ಣದ ಸಕುರಾ ಹೂವುಗಳಿಂದ ಅಲಂಕೃತವಾಗುತ್ತವೆ. ಚೆರ್ರಿ ಋತುವಿನ ಉತ್ಸಾಹವನ್ನು ಸಂಪೂರ್ಣವಾಗಿ ಸೆರೆ ಹಿಡಿಯಲು ಹೊಸ ಹೊಸ ಆಕರ್ಷಕ ಮಾರ್ಕೆಟಿಂಗ್ ಘೋಷಣೆಗಳನ್ನು ಬಿಡುಗಡೆ ಮಾಡುತ್ತದೆ. ಚೆರ್ರಿ ಬ್ಲಾಸಮ್ ವೀಕ್ಷಣೆ ಜಿಕ್ಕೆ ಗಾಗಿ ನೀಳವಾದ ಬಾಟಲಿಗಳನ್ನು ವಿಶೇಷವಾಗಿ ತಯಾರಿಸುತ್ತದೆ, ಏಕೆಂದರೆ ಚಿತ್ರಗಳನ್ನು ತೆಗೆದುಕೊಳ್ಳುವಾಗ ಅವುಗಳನ್ನು ಹಿಡಿದುಕೊಳ್ಳಲು ನೀಲ ಬಾಟಲಿ ಸಹಕಾರಿ. ಆ ಸಮಯದಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ ಎಲ್ಲಿ ನೋಡಿದರೂ ಕೋಕಾ ಕೋಲಾ ವೈಭವ!

ಕೆಲ ವರ್ಷಗಳ ಹಿಂದೆ, ಜಾಕ್ ಡೇನಿಯಲ್ಸ್ ವಿಶೇಷ ಆವೃತ್ತಿಯ 'ಬ್ಲಾಕ್ ಬ್ಲಾಸಮ್' ಮದ್ಯವನ್ನು ಬಿಡುಗಡೆ ಮಾಡಿ ಭಾರಿ ಮಾರಾಟ ಯಶಸ್ಸನ್ನು ಕಂಡಿತು. 'ಬ್ಲಾಕ್ ಬ್ಲಾಸಮ್' ಸೀಮಿತ ಆವೃತ್ತಿಯ ಸಕುರಾ ವಿಷಯದ ಬಾಕ್ಸ್ ಜಪಾನಿನೆಲ್ಲೆಡೆ ಗ್ರಾಹಕರನ್ನು ಬೆರಗುಗೊಳಿಸಿತು. ಇದು ದೇಶೀಯ ಮಾರುಕಟ್ಟೆಯ ಆಗತ್ಯಗಳನ್ನು ಪೂರೈಸಲು ಜಾಕ್ ಡೇನಿಯಲ್ಸ್ ತನ್ನ ಪ್ಯಾಕೇಜಿಂಗ್ ಅನ್ನು ಮೊದಲ ಬಾರಿಗೆ ಬದಲಾಯಿಸಿತು. ಅಂದರೆ ಚೆರ್ರಿ ಹೂವು ಬಹುರಾಷ್ಟ್ರೀಯ ಕಂಪನಿಗಳ ಬೋರ್ಡ್ ರೂಮುಗಳಲ್ಲೂ ಉತ್ಸಾಹವನ್ನು ಆರಳುವಂತೆ ಮಾಡುತ್ತದೆ. 'ಬ್ಲಾಕ್ ಬ್ಲಾಸಮ್' ಏಷ್ಟೆ ಚೆರ್ರಿ ಋತುವಿಗೆ ಸೂಕ್ತವಲ್ಲ ಎಂಬ ಅಭಿಪ್ರಾಯಗಳನ್ನು ಬದಲಾಯಿಸಿತಲ್ಲದೇ, ಜಪಾನಿನಲ್ಲಿ ಬಲವಾಗಿ ಬೇರು ಬಿಡಲು ಸಹಾಯಕವಾಯಿತು. ಅಂದರೆ ಯಾವುದೇ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಮತ್ತು ಹೊಸ ಹೊಸ ಮಾರಾಟ ತಂತ್ರವನ್ನು ಮಾಡಲು ಚೆರ್ರಿ ಋತು ಒಳ್ಳೆಯ ಕಾಲ. ಅಂದರೆ ಚೆರ್ರಿ ಹೂವು ಬಹುರಾಷ್ಟ್ರೀಯ ಕಂಪನಿಗಳ ಬೋರ್ಡ್ ರೂಮುಗಳಲ್ಲೂ, ಉತ್ಸಾಹವನ್ನು ಆರಳುವಂತೆ ಮಾಡುತ್ತದೆ.

ಜಪಾನಿನಲ್ಲಿ ಸುಮಾರು ನೂರಕ್ಕೂ ಅಧಿಕ ಬಗೆಯ ಹತ್ತು ಲಕ್ಷ ಚೆರ್ರಿ ಮರಗಳಿರಬಹುದು. ಇಂದು ಆ ಮರ ದೇಶದ ಪ್ರಗತಿಯ ಸಂಕೇತವಾಗಿದೆ. ಒಂದು ದೇಶ ಮನಸ್ಸು ಮಾಡಿದರೆ, ತನ್ನ ಸಹಜ ಸೌಂದರ್ಯವನ್ನು ಹೇಗೆ ಮಾರ್ಕೆಟ್ ಮಾಡಬಹುದು, ಶೋಕೇಸ್ ಮಾಡಬಹುದು, ಆ ಮೂಲಕ ಅದನ್ನೇ ತನ್ನ ಅರ್ಥ ವ್ಯವಸ್ಥೆ ಬಲವರ್ಧನೆಗೆ ವಾಹಕವಾಗಿ ಪರಿವರ್ತಿಸಬಹುದು ಎಂಬುದಕ್ಕೆ ಚೆರ್ರಿ ಬ್ಲಾಸಮ್ ಒಂದು ಒಳ್ಳೆಯ ನಿದರ್ಶನ. ಮರದಲ್ಲಿ ಚೆರ್ರಿ ಹೂವು ತುಂಬಿದರೆ, ಜೇಬೂ ತುಂಬುತ್ತದೆ!